ಅ.ದಾ. ನಂ. 348/2020 ಪಿ .ಡಬ್ಲ್ಯೂ-1

ದಿನಾಂಕಃ 04.02.2026 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ಯಾವ ಕಾರಣಕ್ಕೆ ಕರಾರು ಪತ್ರ ಬರೆಸಿಕೊಂಡಿರುತ್ತೀರ ಎಂದರೆ ಜಮೀನನ್ನು ಖರೀದಿಸಲು. ಪ್ರತಿವಾದಿ ನಾನು ಕಳಿಸಿರುವ ನೋಟೀಸಿಗೆ ಮರುತ್ತರ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಯಾವ ವಕೀಲರ ಮುಖಾಂತರ ನೋಟೀಸ್ ನೀಡಿರುತ್ತೀರ ಎಂದರೆ ನಾಗರಾಜ್ ವಕೀಲರಿಂದ. ಸದರಿ ವಕೀಲರನ್ನು ಮರುತ್ತರದ ಬಗ್ಗೆ ವಿಚಾರಿಸಿದ್ದೀರ ಎಂದರೆ ಇಲ್ಲ. ಪ್ರತಿವಾದಿ ಮರುತ್ತರ ನೀಡಿರುವ ವಿಚಾರ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು ಬಡ್ಡಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ 2 ಲಕ್ಷ ಸಾಲ ನೀಡಿ ಅದರ ಭದ್ರತೆಗಾಗಿ ನಿಪಿ 1 ಕರಾರನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನೋಟೀಸ್ ಕಳಿಸಿದ ನಂತರ ಪ್ರತಿವಾದಿ ಬಂದು ಸದರಿ ಹಣ ವಾಪಸ್ಸು ಮಾಡುವುದಾಗಿ ತಿಳಿಸಿದರೂ ನಾನು ನಿರಾಕರಿಸಿರುತ್ತೇನೆ ಎಂದರೆ ಸರಿಯಲ್ಲ. ಅಕ್ರಯ ಕಾಯ್ದೆಗಾಗಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

3. ದಾವಾ ಸ್ವತ್ತು ಪ್ರತಿವಾದಿಗೆ ಹೇಗೆ ಬಂದಿರುತ್ತದೆ ಎಂದರೆ ಜೀವನಾಂಶಕ್ಕಾಗಿ ಅವರ ಗಂಡನಿಂದ ಬಂದಿರುತ್ತದೆ. ಪ್ರತಿವಾದಿಯ ಗಂಡನಿಗೆ ಜಯಮ್ಮ ಎಂಬ ಮೊದಲ ಹೆಂಡತಿ ಇದ್ದರು ಎಂದರೆ ಗೊತ್ತಿಲ್ಲ. ಸದರಿ ಜಯಮ್ಮರವರು ಹಾಸನ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ಪರಭಾರೆ ಮಾಡದ ಹಾಗೆ ನಿರ್ಬಂಧಾಜ್ಞೆ ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ದಾವಾ ಸ್ವತ್ತು ಹರಾಜು ಆಗಿರುತ್ತದೆ ಎಂದರೆ ಗೊತ್ತಿಲ್ಲ. ಬಡ್ಡಿ ಆಸೆಗಾಗಿ ಪ್ರತಿವಾದಿಗೆ ಹಣ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಅಥವಾ ಮಂಜುನಾಥರೊಂದಿಗೆ ವ್ಯವಹಾರ ಮಾಡಿರುತ್ತೀರ ಎಂದರೆ ಪ್ರತಿವಾದಿಯೊಂದಿಗೆ.

4. ನಿಪಿ 1ನ್ನು ಯಾರ ಬಳಿ ಬರೆಸಿರುತ್ತೀರ ಎಂದರೆ ಸ್ಟಾಂಪ್‌ವೆಂಡರ್ ಬಳಿ ಹೆಸರು ನೆನಪಿಲ್ಲ. ಪ್ರತಿವಾದಿಗೆ ಯಾವುದೇ ಹಣ ನೀಡದೆ ಸುಳ್ಳು ನಿಪಿ 1 ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ಕ್ಕೆ ಯಾರ್ಯಾರು ಸಾಕ್ಷಿದಾರರಾಗಿರುತ್ತಾರೆ ಎಂದರೆ ಪ್ರತಿವಾದಿಯ ತಮ್ಮ ಮಂಜುನಾಥ್ ಮತ್ತು ನಟೇಶ್. ಪ್ರತಿವಾದಿಗೆ ಮೋಸ ಮಾಡಲು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.